
ಪುಟ ಬಂಗಾರ

# ಕಥೆಗಳ ಮಾಯಾಲೋಕ



**ಬೇಸಿಗೆ** ಕಾಲದಲ್ಲಿ ನಮ್ಮೂರಿನ ಇಡೀ ಜನ ಧಗೆ ತಾಳಲಾರದೆ ಮನೆ ಹೊರಗಡೆ ಮಲಗುತ್ತಿದ್ದರು. ಆಗ ತುಂಬಾಡಿ ಕೆರೆ ತುಂಬಿತೆಂದರೆ ಊರಿನ ಸುತ್ತ–ಮುತ್ತ ಇದ್ದ ಗದ್ದೆ–ತಿಪ್ಪೆಗುಂಡಿಗಳೆಲ್ಲಾ ನೀರು ತುಂಬಿ, ಊರಿನಲ್ಲಿ ಸೊಳ್ಳೆಗಳ ಕಾಟ ಜಾಸ್ತಿಯಾಗುತ್ತಿತ್ತು. ಈ ಸೊಳ್ಳೆಗಳ ಕಾಟದ ಜೊತೆಗೆ ನಾಯಿಗಳ ಕಾಟವೂ ಹೇಳತೀರದು. ದೊಣ್ಣೆ ಪಕ್ಕದಲ್ಲಿಟ್ಟುಕೊಂಡು ನಾವೆಷ್ಟೇ ಎಚ್ಚರಿಕೆಯಿಂದ ಮಲಗಿದ್ದರೂ, ಅದ್ಯಾವ ಮಾಯದಲ್ಲೋ ನಾವು ಹೊದ್ದಿದ್ದ ದುಪ್ಪಿವೊಳಗೆ ತೂರಿ ಮಲಗಿಬಿಡುತ್ತಿದ್ದವು. ಈ ಹೊತ್ತಿನಲ್ಲೇ ನಾವು ನಮ್ಮ ದೊಡ್ಡಪ್ಪ ನಾಗಣ್ಣನ ಹತ್ತಿರ ಕೂತು ಕಥೆ ಕೇಳುತ್ತಿದ್ದೆವು. ದೊಡ್ಡಪ್ಪ ಕಥೆಗಳನ್ನು ಹುಮ್ಮಸ್ಸಿನಿಂದ ಕಳೆಗಟ್ಟಿ ಹೇಳಬೇಕಾಗಿದ್ದರೆ, ಅವನು ಏಳೂರಿಗೊಂದೇ ಇದ್ದ ಮುಗ್ಗೇನಹಳ್ಳಿ ಹೆಂಡದಂಗಡಿಗೆ ಹೋಗಿ ಬಂದಿದ್ದರೆ ಮಾತ್ರ ಕಥೆಗಳನ್ನು ನಾವೆಲ್ಲ ರೆಪ್ಪೆಮುಚ್ಚದೆ ಕೇಳುವಂತೆ ಹೇಳಿ, ನಮ್ಮನ್ನೆಲ್ಲಾ ತನ್ನ ಕಥೆಗಳ ಮಾಯಾಲೋಕಕ್ಕೆ ಕೊಂಡೊಯ್ಯುತ್ತಿದ್ದ. ಹೆಂಡವಿಲ್ಲದೆ ಕಥೆಯ ಒಂದು ಶಬ್ದವೂ ಅವನ ಬಾಯಿಂದ ಹೊರಡುತ್ತಿರಲಿಲ್ಲ.

ಅವರು ಹೇಳುತ್ತಿದ್ದ ಕಥೆಗಳ ಪೈಕಿ ಇವತ್ತಿಗೂ ನನ್ನ ನೆನಪಿನಲ್ಲಿ ಉಳಿದಿರುವ ಕಥೆ ಯಾವುದೆಂದರೆ:

ಒಂದೂರಾಗೆ ಗಂಡಹೆಂಡ್ತೀರಿದ್ರು. ಇಬ್ಬರೂ ಹಳೆಮೆಟ್ಟು ರಿಪೇರಿ ಮಾಡ್ಕಂಡು ಹೊಟ್ಟೆಹೊರೀತಿದ್ರು. ಇರೋಕ್ಕೊಂದು ಗುಡ್ಲು, ಉಡಾಕ್ಕೊಂದು ದುಪ್ಪಿ. ಆ ದುಪ್ಪೀನೆ ರಾತ್ರಿ ಹೊತ್ನಾಗೆ ಇಬ್ರೂ ಸೆರಿ ಹೊದ್ಕಂಡು ಮಲಗ್ತಿದ್ರು, ಬೆಳಕಾಗುತ್ತಿದ್ದಂಗೆ ಹೆಂಡತಿ ಅದೇ ದುಪ್ಪೀನ ಸೀರೆ ಮಾಡ್ಕಂಡು ಉಟ್ಕಳ್ತಿದ್ಲು.

ಒಂದು ದಿನ ಒಬ್ಬ ಕಳ್ಳ ಇವ್ರ ಮನೆಗೆ ಕಳ್ಳತನ ಮಾಡೋಕೆ ಬಂದ. ಗಂಡಹೆಂಡ್ತು ಮಲಗದ್ನೆ ಕಾಯ್ತಾ ಅವರ ಗುಡ್ಲಿಂದೆ ಕುಂತ್ಕಂಡ. ಇವರ ಗುಡ್ಲಲ್ಲಿ ಮೆಟ್ ಸರಿಮಾಡೊ ಉಳಿ, ರಂಪ್ಗೆ ಬಿಟ್ರೆ ಬೇರೆ ಏನೂ ಇರ್ಲಿಲ್ಲ. ಏನೋ ಬೆಳಗಿಂದ ದುಡಿದಿದ್ರಲ್ಲಿ ಒಂದು ಸೇರು ರಾಗಿ ತಂದು ಹಿಟ್ ಮಾಡ್ಕಂಡು ಉಂಡು ಮಲಗಾಕೆ ಸುರುಮಾಡ್ತ ಹೆಂಡ್ತಿ ಕೇಳ್ತಾಳೆ: 'ಏನ್ರೀ, ಗಲ್‌ಗಲ್ ಮಂಚ ಹಾಸ್ಲೋ, ಸಳ್‌ಸಳ್ ಮಂಚ ಹಾಸ್ಲೋ' (ಗಲ್‌ಗಲ್ ಮಂಚ ಅಂದರೆ ನೆಲ್ಲುಲ್ಲು, ಸಳ್‌ಸಳ್ ಮಂಚ ಅಂದ್ರೆ ಬರೀ ನೆಲ). ಅದಕ್ಕೆ ಗಂಡ 'ಸಳ್‌ಸಳ್ ಮಂಚ ಏನು, ಗಲ್‌ಗಲ್ ಮಂಚಾನೆ ಹಾಸು' ಎಂದ.

ಇದನ್ನೆಲ್ಲಾ ಕೇಳ್ತಿದ್ದ ಕಳ್ಳ 'ಓಹೋ ಇವ್ರತ್ರ ಜಾಸ್ತೀನೇ ಸಿಗಂತೆ ಕಾಣ್ತದೆ' ಅಂದ್ಕಂಡ. ಗುಡ್ಲಿಂದೆ ಕಾಯ್ತಾ ಕುಂತಿದ್ದ ಕಳ್ಳ ಗಂಡ–ಹೆಂಡ್ತು ದುಪ್ಪಿ ಹೊದ್ಕಂಡು ನಿದ್ದೆ ಹೋಗೋದೆ ತಡ, ನಿಧಾನಕ್ಕೇ ತಡಿಕೆ ತಪ್ದು ಒಳಗೆ ನುಗ್ದ. ಯಾವಾಗ ಗರಿ ಸರಕ್ಕಂದ್ಲಿ ಗಂಡ ಎದ್ದು, 'ಯಾವನೋ ಅವ್ನು' ಅಂತ ಕಳ್ಳನ್ನ ಭದ್ರವಾಗಿ ಇಡ್ಕಂಡ. ಯಾವಗ ಇಡ್ಕಳ್ತಿ, ಕಳ್ಳ ಸತ್ನೋ ಕೆಟ್ನೋ ಅಂತ, ಅವಾಗ್‌ತಾನೆ ತಾನು ಕದ್ಕಂಡು ಬಂದಿದ್ದ ಹೊಸ ಕಂಬಳೀನ ಅಲ್ಲೇ ಬಿಟ್ಟು ಓಟಕಿತ್ತ. ಸಳೀವಳಗೆ ನಡುಗ್ತಿದ್ದವರಿಗೆ ಯಾವಾಗ ಕಳ್ಳ ಬಿಟ್ಹೋಗಿದ್ದ ಕಂಬ್ಳಿ ಸಿಗಲಿ, ಕಂಬಳೀನ ಗಂಡ ಹೊದ್ಕಂಡ., ದುಪ್ಪೀನ ಹೆಂಡ್ತಿ ಹೊದ್ಕಂಡ್ಲು. ಆಗ ಗಂಡ–ಹೆಂಡ್ತಿ ಮಾತಾಡ್ತವ್ರೆ:

'ಏನ್ರೀ ನಾನೀಗ ಹೆಂಗೆ ಕಾಣಿಸ್ತೀನಿ?'

'ಸಾಕ್ಷಾತ್ ಸೀತಾದೇವಿ ಇದ್ದಂಗೆ ಇದ್ದಿಯಾ!... ನಾನೀಗ ಗೆಂಗೆ ಕಾಣಿಸ್ತೀನೆ?'

'ಸಾಕ್ಷಾತ್ ಶ್ರೀರಾಮರಿದ್ದಂತೆ ಇದ್ದೀರಿ!'

ಅನ್ಯಾಯವಾಗಿ ತನ್ನ ಕಂಬ್ಳಿ ಕಳಕೊಂಡ ಆ ಕಳ್ಳ, ತನ್ನ ಕಂಬ್ಳಿನಾದರೂ ವಾಪಸ್ ತಗಂಡೋಗಣ ಅಂತ ಹಿಂತಿರುಗಿ ಬಂದು ಗುಡ್ಲು ಹಿಂದುಗಡೆ ಚಳಿ ತಡೆಯಲಾರದೆ ನಡುಗುತ್ತಾ ನಿಂತಿದ್ದ. ಒಳಗಡೆ ಗಂಡ–ಹೆಂಡ್ತು ಮಾತಾಡುತ್ತಿದ್ದ ಮಾತುಗಳನ್ನು ಕೇಳಿ, ಚಳಿ ತಡೀಲಾರದೆ ಸಿಟ್ಟಿನಲ್ಲಿ 'ನನ್ನ ಹೇಲ್‌ಗೊದ್ದೆ ಇದ್ದಂಗಿದ್ದೀರಿ!' ಅಂದು ಅಲ್ಲಿಂದ ಕಂಬಿಕಿತ್ತ!

**ತುಂಬಾಡಿ ರಾಮಯ್ಯನವರ 'ಮಣೆಗಾರ' ಆತ್ಮಕಥನದ ಒಂದು ಭಾಗ**